ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೦೭

# ಕರ್ನಾಟಕ ವಿಧಾನ ಪರಿಷತ್ತು

## ನೂರ ಇಪ್ಪತ್ತೈದನೆಯ ಅಧಿವೇಶನ

**ಮಂಗಳವಾರ, ದಿನಾಂಕ: ೧ನೇ ಜುಲೈ ೨೦೧೪**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

---

### ನಗರ ಹಾಗೂ ಗ್ರಾಮೀಣ ಯಶಸ್ವಿನಿ ಯೋಜನೆಯ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನ ಸಭೆಯಿಂದ ಚುನಾಯಿತರಾದವರು) –**

೯೧ (೪೩೩) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ನಗರ ಮತ್ತು ಗ್ರಾಮೀಣ ಯಶಸ್ವಿನಿ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿದೆ ; ಇಲ್ಲಿಯವರೆಗೆ ಎಷ್ಟು ಹಣವನ್ನು ಯಾವುದಕ್ಕೆ ವಿನಿಯೋಗಿಸಲಾಗಿದೆ ;

(ಆ) ಗ್ರಾಮೀಣ ಹಾಗೂ ನಗರ ಯಶಸ್ವಿನಿ ಯೋಜನೆಯಡಿ ಎಷ್ಟು ಫಲಾನುಭವಿಗಳಿದ್ದಾರೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಎಷ್ಟು ಜಿಲ್ಲಾ ಕೇಂದ್ರಗಳಲ್ಲಿ X-Ray and Radiation Therapy ಲಭ್ಯವಿರುತ್ತವೇ ;

(ಈ) ನಗರ ಮತ್ತು ಗ್ರಾಮೀಣ ಯೋಜನೆಯಡಿ ಪರಿಶಿಷ್ಟ ಜಾತಿ / ಪಂಗಡದ ಫಲಾನುಭವಿಗಳೆಷ್ಟು ; ಇದಕ್ಕಾಗಿ ಎಷ್ಟು ಹಣವನ್ನು ವಿನಿಯೋಗಿಸಲಾಗಿದೆ; ಈ ಫಲಾನುಭವಿಗಳಿಗೆ ಸರ್ಕಾರ ನೀಡುತ್ತಿರುವ ಸಹಾಯಧನವೆಷ್ಟು ?

## ಲೈನ್ ಮ್ಯಾನ್‌ಗಳ ಕೊರತೆ

**ಶ್ರೀ ಬಿ. ರಾಮಕೃಷ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೨ (೪೬೭) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಲೈನ್ ಮ್ಯಾನ್‌ಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿ ಮಂಜೂರಾದ ಲೈನ್ ಮ್ಯಾನ್‌ಗಳ ಹುದ್ದೆಗಳೆಷ್ಟು ; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳೆಷ್ಟು ; ಇನ್ನೂ ಅವಶ್ಯವಿರುವ ಲೈನ್ ಮೆನ್ ಹುದ್ದೆಗಳೆಷ್ಟು ; (ವಿಭಾಗ/ಕಂಪನಿವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಅವಶ್ಯವಿರುವ ಲೈನ್ ಮೆನ್ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಬಳ್ಳಾರಿ–ಹೊಸಪೇಟೆ ರಾಷ್ಟ್ರೀಯ ಹೆದ್ದಾರಿಯ ಗುಂಡಿಗಳು

**ಶ್ರೀ ಮೃತ್ಯುಂಜಯ ಜಿನಗಾ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೩ (೪೬೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬಳ್ಳಾರಿ–ಹೊಸಪೇಟೆ ರಾಷ್ಟ್ರೀಯ ಹೆದ್ದಾರಿ ವಾಹನಗಳ ಭಾರಿ ದಟ್ಟಣೆಯಿಂದ ಈಗ ಸಂಪೂರ್ಣ ಹಾಳಾಗಿದ್ದು, ಈ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ;

(ಆ) ವಾಹನಗಳ ಭಾರಿ ದಟ್ಟಣೆಯಿಂದ ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ಇವುಗಳನ್ನು ಮುಚ್ಚಲು ಎಷ್ಟು ಅನುದಾನ ಬಿಡುಗಡೆಗೊಳಿಸಲಿದೆ ;

(ಇ) ಯಾವ ಕಾಲಮಿತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಸರಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗುತ್ತದೆ ?

## ತೆಂಗು ಮಾರುಕಟ್ಟೆ ಸ್ಥಾಪನೆ

**ಶ್ರೀ ಜಿ. ರಘು ಆಚಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೪ (೪೧೭) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ತೆಂಗು ಬೆಳೆಗಾರರಿಗೆ ಅನುಕೂಲವಾಗುವಂತೆ ಚಿತ್ರದುರ್ಗ ಜಿಲ್ಲೆಯಲ್ಲಿ ತೆಂಗು ಮಾರುಕಟ್ಟೆ ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ;

(ಆ) ಇದ್ದಲ್ಲಿ, ಸರ್ಕಾರ ಅದಕ್ಕಾಗಿ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಕೇಂದ್ರ ರಸ್ತೆ ಅನುದಾನ (C.R.F.)

**ಶ್ರೀ ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೯೫ (೪೪೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೇಂದ್ರ ರಸ್ತೆ ಅನುದಾನ (C.R.F.) ಯೋಜನೆ ಅಡಿಯಲ್ಲಿ ಈ ಬಾರಿ ರಾಜ್ಯಕ್ಕೆ ಮಂಜೂರಾದ ಅನುದಾನವೆಷ್ಟು ; ಯಾವ ಯಾವ ಕಾಮಗಾರಿಗಳಿಗೆ ಅನುದಾನ ನೀಡಲಾಗಿದೆ ; ಇದರಲ್ಲಿ ಬೆಳಗಾಂ ಜಿಲ್ಲೆಗೆ ಮಂಜೂರಾದ ಹಣವೆಷ್ಟು ;

(ಆ) ಈ ಯೋಜನೆ ಅಡಿ ಅನುದಾನ ಮಂಜೂರಾಗದೆ ಇರುವ ಮಾನದಂಡಗಳೇನು ?

## ವಿದ್ಯುತ್ ಪ್ರಸರಣ ನಿಗಮ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು) –**

೯೬ (೪೪೨) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದಲ್ಲಿ ಕರ್ತವ್ಯ ನಿರತರಾಗಿದ್ದಾಗ ಕೇಬಲ್ ಜೋಡಣೆ ಸಂದರ್ಭದಲ್ಲಿ ವಿದ್ಯುತ್ ವಾಹಕ ಸ್ಫೋಟಗೊಂಡು ಅಂಗವಿಕಲತೆ ಹೊಂದಿರುವ/ದೈವಾಧೀನರಾದ ಖಾಯಂ ಸಿಬ್ಬಂದಿ/ಗುತ್ತಿಗೆ ಆಧಾರದ ಸಿಬ್ಬಂದಿಗಳ ಸಂಖ್ಯೆ ಎಷ್ಟು ;

(ಆ) ಕಳೆದ ಹತ್ತು ವರ್ಷಗಳಲ್ಲಿ ಇಂತಹ ಎಷ್ಟು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆ ;

(ಇ) ಇಂತಹ ಪ್ರಕರಣಗಳಲ್ಲಿ ಎಷ್ಟು ಮಂದಿಗೆ ಪರಿಹಾರ ನೀಡಿದೆ ಹಾಗೂ ಪರಿಹಾರದ ಸ್ವರೂಪವೇನು ;

(ಈ) ಪರಿಹಾರ ನೀಡದೆ, ಕ್ರಮ ಕೈಗೊಳ್ಳದೆ ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಇದಕ್ಕೆ ಕಾರಣಗಳೇನು ;

(ಉ) ಮೂಡಿಗೆರೆ ಕ್ಷೇತ್ರದಲ್ಲಿ ಮೆಸ್ಕಾಂ ಕಛೇರಿಯಲ್ಲಿ ಖಾಲಿಯಿರುವ ಹುದ್ದೆಗಳೆಷ್ಟು;

(ಊ) ವೃಂದವಾರು ಖಾಲಿಯಿರುವ ಹುದ್ದೆಗಳೆಷ್ಟು ; ವಿವರ ನೀಡುವುದು ?

**ತೋಟಗಾರಿಕಾ ಇಲಾಖೆಯ ಚಟುವಟಿಕೆಗೆ ಒಳಪಟ್ಟ ಒಟ್ಟು ಭೂಮಿಯ ಮಾಹಿತಿ ನೀಡುವ ಬಗ್ಗೆ**

**ಶ್ರೀ ಸಿ.ಹೆಚ್. ವಿಜಯ ಶಂಕರ (ವಿಧಾನಸಭೆಯಿಂದ ಚುನಾಯಿತರಾದವರು) –**

೯೭ (೪೩೪) ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ತೋಟಗಾರಿಕೆ ಚಟುವಟಿಕೆಯಿಂದ ಕೂಡಿದ ಹಾಗೂ ಅದರ ವ್ಯಾಪ್ತಿಗೆ ಒಳಪಟ್ಟ ಒಟ್ಟು ಭೂ ಪ್ರದೇಶವೆಷ್ಟು ;

(ಆ) ಕಳೆದ ಹತ್ತು ವರ್ಷಗಳಲ್ಲಿ ತೋಟಗಾರಿಕೆಯಿಂದ ಕೂಡಿದ ಈ ರೀತಿಯ ಎಷ್ಟು ಭೂ ಪ್ರದೇಶ ಕೃಷಿಯೇತರ ಉದ್ದೇಶಕ್ಕಾಗಿ ಹಾಗೂ ಅನ್ಯ ಇಲಾಖೆಗಳ ಉಪಯೋಗಕ್ಕಾಗಿ ಭೂಸ್ವಾಧೀನಕ್ಕೆ ಒಳಪಟ್ಟ ಭೂಮಿಯ ವಿಸ್ತೀರ್ಣದ ಪ್ರಮಾಣವೆಷ್ಟು ;

(ಇ) ತೋಟಗಾರಿಕೆಗೆ ಒಳಪಟ್ಟ ಭೂಮಿಯನ್ನು ಈ ರೀತಿ ಅನ್ಯ ಉದ್ದೇಶಗಳಿಗಾಗಿ ಭೂಸ್ವಾಧೀನಗೊಳಿಸುವ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆಯ ಅಭಿಪ್ರಾಯ ಮತ್ತು ಅನುಮತಿಯನ್ನು ಕೇಳಲಾಗುತ್ತಿದೆಯೇ ;

(ಈ) ತೋಟಗಾರಿಕೆ ಇಲಾಖೆಯ ಒಪ್ಪಿಗೆಯನ್ನು ಪಡೆಯದೆ ಭೂಸ್ವಾಧೀನಗೊಂಡ (ಕಳೆದ ೧೦ ವರ್ಷಗಳಲ್ಲಿ) ತೋಟಗಾರಿಕೆ ಭೂಮಿಯ ಪ್ರಮಾಣವೆಷ್ಟು ; ಇಲಾಖಾ ಅಭಿಪ್ರಾಯ ಕೇಳದೆ ಅನ್ಯ ಉದ್ದೇಶಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆಗೆ ತೋಟಗಾರಿಕೆ ಭೂಮಿ ಒಳಪಟ್ಟ ಸಂದರ್ಭದಲ್ಲಿ ಇಲಾಖೆ ತೆಗೆದುಕೊಳ್ಳಬಹುದಾದ ಮತ್ತು ತೆಗೆದುಕೊಳ್ಳುತ್ತಿರುವ ಕ್ರಮಗಳೇನು ?

**ನೇಕಾರರಿಗೆ ಕೃಷಿಯೇತರ ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ**

**ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ (ಅಣ್ಣಯ್ಯ) (ನಾಮನಿರ್ದೇಶನ ಹೊಂದಿದವರು) –**

೯೮ (೪೪೬) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ನೇಕಾರರಿಗೆ ಸಹಕಾರಿ ಬ್ಯಾಂಕ್‌ಗಳಲ್ಲಿ ಸಾಲ ನೀಡಲಾಗುತ್ತಿದೆಯೇ;

(ಆ) ಹಾಗಿದ್ದಲ್ಲಿ, ನಿರ್ದಿಷ್ಟವಾಗಿ ಯಾವ-ಯಾವ ಸಂಘಗಳು ಹಾಗೂ ಬ್ಯಾಂಕ್‌ಗಳು ಸಾಲ ನೀಡುತ್ತವೆ ; ಪೂರ್ಣ ವಿವರ ನೀಡುವುದು ;

(ಇ) ನೇಕಾರರಿಗೆ ಸಾಲ ನೀಡುವ ಬಗ್ಗೆ ಇರುವ ಮಾನದಂಡವೇನು ;

(ಈ) ಕೃಷಿಯೇತರ ಬ್ಯಾಂಕ್‌ಗಳಲ್ಲಿ ಸಾಲ ನೀಡಲು ಇರುವ ತೊಂದರೆಯೇನು ;

(ಉ) ನೇಕಾರರಿಗೆ ನೀಡುವ ಸಾಲಕ್ಕೆ ರೈತರಿಗೆ ನೀಡುವ "೦" ಪರ್ಸೆಂಟ್ ಬಡ್ಡಿಯಂತೆ ಸಾಲ ನೀಡಲು ಸರ್ಕಾರ ಯೋಚಿಸಿದೆಯೇ ;

(ಊ) ಹಾಗಿದ್ದಲ್ಲಿ, ಬಡ ನೇಕಾರರಿಗೆ ಯಾವ ಬಡ್ಡಿ ದರದಲ್ಲಿ ಸಾಲ ನೀಡಲಾಗುತ್ತದೆ?

## ರಸ್ತೆ ಹದಗೆಟ್ಟಿರುವ ಬಗ್ಗೆ

**ಶ್ರೀ ಟಿ. ಜಾನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೯ (೪೪೦) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಪಿರಿಯಾಪಟ್ಟಣ-ಸಿದ್ದಾಪುರ ರಸ್ತೆಯು ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಸದರಿ ಕಾಮಗಾರಿಯು ವಿಳಂಬವಾಗಲು ಕಾರಣಗಳೇನು ;

(ಇ) ಸದರಿ ರಸ್ತೆಯ ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ ? (ವಿವರ ನೀಡುವುದು)

## ಹೆಚ್ಚುವರಿ ಇಂಧನ ಉತ್ಪಾದನೆ

**ಡಾ|| ಮತ್ತಿಕಟ್ಟೆ ವೀರಣ್ಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೦ (೪೦೬) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಇಂಧನದ ತೀವ್ರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇಂಧನದ ಕೊರತೆಯನ್ನು ನಿವಾರಿಸಲು ಮತ್ತು ಹೆಚ್ಚುವರಿ ಇಂಧನ ಉತ್ಪಾದಿಸಲು ಸರ್ಕಾರವು ಕೈಗೊಳ್ಳುತ್ತಿರುವ ಕ್ರಮಗಳೇನು ;

(ಇ) ಬ್ಲೂಮ್ ಎನರ್ಜಿ ಸರ್ವರ್‌ಗಳನ್ನು ಸ್ಥಾಪಿಸುವ ಮೂಲಕ ಹೆಚ್ಚಿನ ಇಂಧನ ಪಡೆಯುವ ಯೋಜನೆಯನ್ನು ಸರ್ಕಾರವು ಪರಿಶೀಲಿಸುವುದೆ ?

## ಕೊಪ್ಪಳ ಜಿಲ್ಲೆಯ ನಗರಸಭೆ, ಪುರಸಭೆ ಪಟ್ಟಣ ಪಂಚಾಯತ್ ಘನ ತ್ಯಾಜ್ಯ ವಿಲೇವಾರಿ

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೧ (**೪೫೧**) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೊಪ್ಪಳ ಜಿಲ್ಲೆಯಲ್ಲಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್‌ಗಳಿಗೆ ಘನ ತ್ಯಾಜ್ಯ ವಿಲೇವಾರಿಗಾಗಿ ೨೦೧೨–೧೩ ರಿಂದ ಪ್ರಸಕ್ತ ಸಾಲಿನವರೆಗೂ ಸ್ವೀಕೃತವಾದ ಅನುದಾನ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಸದರಿ ಅನುದಾನದಲ್ಲಿ ಘನ ತ್ಯಾಜ್ಯ ವಿಲೇವಾರಿಗಾಗಿ ರೂಪಿಸಿದ ಕಾರ್ಯಕ್ರಮಗಳೇನು ;

(ಇ) ಖರೀದಿಸಿದ ವಾಹನ ಮತ್ತು ಯಂತ್ರೋಪಕರಣಗಳ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು ;

(ಈ) ಪ್ರತಿ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತಿಗಳಲ್ಲಿ ಘನ ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಲಾಗಿದೆಯೇ ; (ವಿವರ ನೀಡುವುದು)

(ಉ) ಇಲ್ಲವಾದಲ್ಲಿ, ಈ ಕುರಿತು ಇಲಾಖೆಯವರು ಅನುಸರಿಸಿದ ಕ್ರಮಗಳೇನು?

## ಠೇವಣಿದಾರರಿಗೆ ವಂಚನೆ ಆಗಿರುವುದು

**ಶ್ರೀ ರಾಮಚಂದ್ರ ಗೌಡ (ಪದವೀಧರರ ಕ್ಷೇತ್ರ) –**

೧೦೨ (**೪೫೫**) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಂಗಳೂರು ನಗರದ ಸ್ತ್ರೀ ಶಕ್ತಿ ಸೌಹಾರ್ದ ಪತ್ತಿನ ಸಹಕಾರಿ ಬ್ಯಾಂಕ್‌ನಿಂದ ಠೇವಣಿದಾರರಿಗೆ ವಂಚನೆಯಾಗಿರುವುದು ನಿಜವೆ ; ನಿಜವಾಗಿದ್ದಲ್ಲಿ, ವಂಚನೆಯ ಪ್ರಮಾಣವೇನು ;

(ಆ) ಶೇಕಡಾ ೧೬ ರಿಂದ ಶೇಕಡಾ ೨೦ರವರೆಗೆ ಅಥವಾ ಅದಕ್ಕೂ ಹೆಚ್ಚಿನ ಬಡ್ಡಿ ನೀಡುವ ಭರವಸೆಯೊಂದಿಗೆ ಠೇವಣಿದಾರರಿಗೆ ಬಾಂಡ್ ನೀಡಿರುವ ಸಹಕಾರಿ ಬ್ಯಾಂಕ್‌ಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವು ಯಾವುವು ;

(ಇ) ಈ ರೀತಿ ಠೇವಣಿದಾರರಿಗೆ ಆಸೆ ತೋರಿಸಿ ವಂಚನೆ ಮಾಡುತ್ತಿರುವುದನ್ನು ತಡೆಗಟ್ಟಲು ಸರ್ಕಾರ ಯಾವ ಮುಂಜಾಗ್ರತಾ ಕ್ರಮ ಕೈಗೊಂಡಿದೆ ?

## ಸಹಕಾರ ಸಂಘಗಳ ವಿಚಾರಣೆ ಬಗ್ಗೆ

**ಶ್ರೀ ಭಾನುಪ್ರಕಾಶ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೩. (೪೫೩) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಸಹಕಾರ ಸಂಘಗಳಲ್ಲಿ, ಕರ್ನಾಟಕ ಸಹಕಾರ ಕಾಯ್ದೆ ಕಲಂ ೬೪ರ ಪ್ರಕಾರ ವಿಚಾರಣೆಗೆ ಆದೇಶವಾಗಿರುವ ಪ್ರಕರಣಗಳೆಷ್ಟು ; ಸಂಘದ ಹೆಸರುಗಳನ್ನು ಜಿಲ್ಲಾವಾರು ನೀಡುವುದು ;

(ಆ) ಸರ್ಕಾರಕ್ಕೆ ಸಲ್ಲಿಸಿರುವ ವರದಿಗಳ ಪ್ರಕಾರ ವಿಚಾರಣೆ ಮುಕ್ತಾಯವಾಗಿರುವ ಸಹಕಾರ ಸಂಸ್ಥೆಗಳು ಯಾವುವು ;

(ಇ) ವಿಚಾರಣೆ ಮುಕ್ತಯವಾಗಿ, ಸರ್ಕಾರಕ್ಕೆ ವರದಿ ಸಲ್ಲಿಸಿರುವ ಮೇಲ್ಕಂಡ ಸಹಕಾರಿ ಸಂಸ್ಥೆಗಳ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿನ ರಸ್ತೆಗಳಲ್ಲಿ ಟೋಲ್ ಸಂಗ್ರಹಣೆ ಕುರಿತು

**ಶ್ರೀ ಕವಟಗಿಮಠ ಮಹಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೪. (೪೨೯) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಇರುವ ಒಟ್ಟು ರಾಜ್ಯ ಹೆದ್ದಾರಿಗಳು ಎಷ್ಟು ; ಇಂತಹ ರಾಜ್ಯ ಹೆದ್ದಾರಿಗಳನ್ನು ಕೇಂದ್ರ ಸರ್ಕಾರದ ಸರ್ಫೇಸ್ಟ ಟ್ರಾನ್ಸ್‌ಪೋರ್ಟ್ (ಭೂ ಸಾರಿಗೆ) ಇಲಾಖೆಯ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರಿಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಸರ್ಕಾರ ಗಮನಹರಿಸಿದೆಯೇ ;

(ಆ) ಹಾಗಿದ್ದಲ್ಲಿ, ರಾಜ್ಯದಲ್ಲಿರುವ ಇಂತಹ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಪರಿವರ್ತಿಸಲು ಸರ್ಕಾರ ಕ್ರಮ ಕೈಗೊಂಡಿದೆ;

(ಇ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿ ಸಂಖ್ಯೆ: ೧೨ ಗೋಟೂರ–ಬಾಗವಾಡ–ಬಿಜಾಪುರ ಹೆದ್ದಾರಿಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ವಿಚಾರ ಸರ್ಕಾರದ ಮುಂದೆ ಇದೆಯೇ ?

## ಅಸಾಂಪ್ರದಾಯಿಕ (Non-Conventional) ಇಂಧನಕ್ಕೆ ಮೀಸಲಿಟ್ಟ ಹಣದ ಬಗ್ಗೆ

**ಡಾ॥ ಎಂ.ಆರ್. ಹುಲಿನಾಯ್ಕರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೫ (೪೩೯) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) Non-Conventional ಇಂಧನಕ್ಕೆ ಮೀಸಲಿಟ್ಟಿರುವ ಹಣವೆಷ್ಟು ;

(ಆ) ಈಗಾಗಲೇ ಅದಕ್ಕಾಗಿ ವಿನಿಯೋಗಿಸಿದ ಹಣವೆಷ್ಟು ;

(ಇ) ಯಾವ ಯಾವ ಯೋಜನೆಗಳು ಅಸ್ಥಿತ್ವದಲ್ಲಿದೆ ವಿವರ ಕೊಡುವುದು ;

(ಈ) ಮುಂದಿನ ೫ ವರ್ಷಗಳಲ್ಲಿ ಎಷ್ಟು ಇಂಧನ (Non-Conventional) ಉತ್ಪಾದಿಸುವ ಗುರಿ ಹೊಂದಲಾಗಿದೆ ?

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಪಿ7, ಕಾ.ಸೂ. 254, ಪ್ರತಿಗಳು 1000